ಸಂಖ್ಯೆ:ಆಇ 945 ವೆಚ್ಚ-12/18

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:11.10.2018

## ಅಧಿಸೂಚನೆ

ಸರ್ಕಾರದ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ನಿಗಮಗಳು ಹಾಗೂ ಮಂಡಳಿಗಳು ಈ ಕೆಳಕಂಡ ಸೇವೆಗಳನ್ನು ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ:ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (KEONICS) ನಿಂದ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಒಂದು ವರ್ಷದ ಅವಧಿಗೆ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ – 1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

(ರೂ.ಕೋಟಿಗಳಲ್ಲಿ)

| ಕ್ರ.ಸಂ | ಕಿಯೋನಿಕ್ಸ್ ಸಂಸ್ಥೆಯಿಂದ ಪಡೆಯಬಹುದಾದ ಸೇವೆಗಳು | ಪ್ರತಿ ಸಂಗ್ರಹಣೆಯ ಗರಿಷ್ಠ ಮೊತ್ತ |
|---|---|---|
| 01 | IT-Software, IT-Hardware, Networking & IT Service | 1.00 |
| 02 | Cloud/Keonics IT Enabled Services (KITES) | 0.50 |
| 03 | Project Development Service | 1.00 |
| 04 | Human Resources (Data Entry Operators & IT Manpower) | Not exceeding Rs.10.00 Cr. per annum per Procurement Entity |

ಷರತ್ತುಗಳು:

1) ಕಿಯೋನಿಕ್ಸ್ ಸಂಸ್ಥೆಯು ಮೇಲಿನ ಸೇವೆಗಳನ್ನು ತನ್ನ ಆಂತರಿಕ/ಸ್ವಂತ ಸಂಪನ್ಮೂಲಗಳಿಂದ ಒದಗಿಸದೇ ಬಾಹ್ಯ ಮೂಲಗಳಿಂದ ಪಡೆಯುವುದಾದಲ್ಲಿ ಈ ಕೆಳಕಂಡ ವಿಧಾನಗಳನ್ನು ಕಡ್ಡಾಯವಾಗಿ ಅನುಸರಿಸಿ ಒದಗಿಸುವುದು.

(ಅ) ಕಿಯೋನಿಕ್ಸ್ ಸಂಸ್ಥೆಯು ಮೇಲಿನ ಸೇವೆಗಳನ್ನು ಒದಗಿಸುವಾಗ ಕೆ.ಟಿ.ಪಿ.ಪಿ ಕಾಯ್ದೆ ಹಾಗೂ ನಿಯಮಗಳ ಅನ್ವಯ ಟೆಂಡರ್ ಪ್ರಕ್ರಿಯೆ ಕೈಗೊಂಡು ಎಲ್-1 ದರ ನೀಡುವ ಸಂಸ್ಥೆಯಿಂದ ಸೇವೆಗಳನ್ನು ಸಂಗ್ರಹಣಾ ಸಂಸ್ಥೆಗಳಿಗೆ ಒದಗಿಸಲು ಕ್ರಮವಹಿಸತಕ್ಕದ್ದು.

(ಆ) ಕೆ.ಟಿ.ಪಿ.ಪಿ ಕಾಯ್ದೆ ಮತ್ತು ನಿಯಮಗಳನ್ವಯ ನಿಗದಿತ ಟೆಂಡರ್ ಪ್ರಕ್ರಿಯೆ ಕೈಗೊಂಡು ಭಾಗವಹಿಸಿದ ಟೆಂಡರ್‌ದಾರರ ತಾಂತ್ರಿಕ ಅರ್ಹತೆಗಳನ್ನು ಪರಿಶೀಲಿಸಿ, ತಾಂತ್ರಿಕವಾಗಿ ಅರ್ಹರಾದ ಗುತ್ತಿಗೆದಾರರ ದರಗಳನ್ನು ಪರಿಶೀಲಿಸಿ, ನಿಯಮಾನುಸಾರ ದರ ಸಂಧಾನ ನಡೆಸಿ, ನಿಗದಿತ ಅವಧಿಗೆ ಗುತ್ತಿಗೆದಾರರ ಮಾನ್ಯತಾ ಪಟ್ಟಿ (Empanelled list) /ಸೇವೆವಾರು ದರ ಒಪ್ಪಂದ (Rate Contract) ಮಾಡಿಕೊಳ್ಳುವುದು ಹಾಗೂ ಅದರ ಅನುಸಾರ ಸಂಗ್ರಹಣಾ ಸಂಸ್ಥೆಗಳ ಬೇಡಿಕೆ ಮೇರೆಗೆ ವಿನಾಯತಿ ನೀಡಿದ ಗರಿಷ್ಠ ಮೊತ್ತಕ್ಕೆ ಒಳಪಟ್ಟು ಸೇವೆಗಳನ್ನು ಒದಗಿಸುವುದು.

2) ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಂಗ್ರಹಣಾ ಸಂಸ್ಥೆಗಳು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಿ.ಎನ್. ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)
8/11/10

ಇವರಿಗೆ:

ಜಂಟಿ ನಿರ್ದೇಶಕರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಆರ್.ವಿ.ಕಾಲೇಜು ಅಂಚೆ, ಮೈಸೂರು ರಸ್ತೆ, ಕಂಗೇರಿ, ಬೆಂಗಳೂರು-59, ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಸಲುವಾಗಿ ಹಾಗೂ 25 ಮುದ್ರಿತ ಪ್ರತಿಗಳನ್ನು ಸರಬರಾಜು ಮಾಡಲು ಕೋರಿದೆ.

ಪ್ರತಿ:

1) ಮಹಾಲೇಖಪಾಲರು (ಲೆಕ್ಕ ಮತ್ತು ಪರಿಶೋಧನೆ), ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.
3) ರಾಜ್ಯ ಪತ್ರಾಗಾರ ಇಲಾಖೆ, ವಿಕಾಸಸೌಧ, ಬೆಂಗಳೂರು-10 ಪ್ರತಿಗಳು.
4) ಹೆಚ್ಚುವರಿ ಪ್ರತಿಗಳು.